ಮಾಡುತ್ತಾನೆಂಬ ಸುದ್ದಿ ಇತ್ತು. ಶಿವಣ್ಣನಿಗೆ ಯಾರೊ ಈ ಸುದ್ದಿ ಹೇಳಿದಾಗ ಅವನದಕ್ಕೆ ತಲೆ ಕೆಡಿಸಿಕೊಳ್ಳಲಿಲ್ಲ. ಜನಾಭಿಪ್ರಾಯ ಅವನಿಗೆ ಮುಖ್ಯ ಅನಿಸಲೂ ಇಲ್ಲ. ತನ್ನ ಪಾಡಿಗೆ ತಾನು ನಾರು ಬೇರಿನ ಮೂಲಕ ಜೀವನ ನಡೆಸುತ್ತಲೇ ಇದ್ದುಬಿಟ್ಟ.

ಪ್ರಸಾದ ಸದಾಕಾಲ ಒಂದಿಲ್ಲೊಂದು ಕೆಲಸ ಮಾಡುವ ಸ್ವಭಾವದವ. ವೈದಿಕ ವೃತ್ತಿಯ ಪ್ರತಿ ಕೆಲಸ ಕಾರ್ಯಗಳಿಗೂ ಚೆನ್ನಾಗಿ ಒಡ್ಡಿಕೊಳ್ಳುವವನು. ಯಾರು ಸತ್ಯನಾರಾಯಣ ಪೂಜೆ, ಸುದರ್ಶನ ಹೋಮ ಮುಂತಾದವು ನಡೆಸಬೇಕಾದರೂ ಇವನನ್ನೇ ಕರೆಯುತ್ತಿದ್ದರು. ಏಕೆಂದರೆ ಅವನಷ್ಟು ಸ್ಪಷ್ಟವಾಗಿ ಸಂಸ್ಕೃತ ಶ್ಲೋಕಗಳನ್ನು ಯಾರೂ ಹೇಳುತ್ತಿರಲಿಲ್ಲ. ದೇವಸ್ಥಾನದಲ್ಲಿ ಸಹ ಪ್ರತಿ ಕಾರ್ಯಕ್ರಮಗಳನ್ನೂ ಪ್ರಸಾದನೇ ಮೇಲುಸ್ತುವಾರಿಗೆ ನಿಂತು ನಿಭಾಯಿಸುತ್ತಿದ್ದ. ಜನರನ್ನು ಕೂಡಿಸುವುದು, ಹಣದ ಸಂಗ್ರಹಣೆ, ಚರಪು, ಬಂದ ವಿದ್ವಾಂಸರಿಗೆ ವಾಹನ, ವಸತಿ ಬಗ್ಗೆ ಏರ್ಪಾಡು ಮಾಡುವುದು ಎಲ್ಲ ಇವನ ಹೆಗಲ ಮೇಲೇ ಇರುತ್ತಿತ್ತು. ಇದರೊಂದಿಗೆ ದೇವರ ಪೂಜಾ ಸೇವೆಗಳು, ಉತ್ಸವಾದಿಗಳು ಇದ್ದುದೇ. ತಂದೆಯ ನೆರಳಲ್ಲಿ ಬೆಳೆದವನು ಈಗ ತಂದೆಗೆ ನೆರಳು ಕೊಡುವವನು. ಆದರೆ, ಈಚೆಗೆ ಆದೇನಾಯಿತೊ ಏನೊ, ಸದಾ ಬಳಲಿಕೆ. ಯಾಂತ್ರಿಕವಾಗಿ ಮಾಡುವ ಕೆಲಸಗಳನ್ನೆಲ್ಲಾ ದೇವಸ್ಥಾನದಲ್ಲಿ ಮಾಡುತ್ತಿದ್ದರೂ, ಬಳಲಿಕೆ ಹೊತ್ತೇ ಮಾಡುತ್ತಿದ್ದಂತೆ ಕಾಣುತ್ತಿತ್ತು.

ಪ್ರತಿ ಕಾರ್ಯದ ವೇಗವೂ ಕಮ್ಮಿಯಾಗಿ ಹೋದ್ದರಿಂದ ಅವನಿಗೆ ತನ್ನ ಅನಾರೋಗ್ಯದ ಬಗ್ಗೆ ಡಾಕ್ಟರ ಬಳಿ ಹೋಗಿ ತೋರಿಸಲೂ ಪುರುಸೊತ್ತು ಸಿಗುತ್ತಿರಲಿಲ್ಲ. ಕಾಲೆಳೆದುಕೊಂಡು ಎಲ್ಲ ಕೆಲಸ ಮಾಡಿ ಮುಗಿಸುತ್ತಿದ್ದ. ಹೆಚ್ಚು ಮಾತು ಬೇಡ, ಊಟ ಬೇಡ ಎಂದಾಯಿತು. ನಿದ್ದೆ ಸಹಾ ಸರಿಯಾಗಿ ಬರುತ್ತಿರಲಿಲ್ಲ. ಶಿವಣ್ಣನ ವೈದ್ಯ ಸುಲಭವಾಗಿ ಕೈ ಅಳತೆಯಲ್ಲಿ ಸಿಗುತ್ತಿದ್ದರಿಂದ ಅವನ ವೈದ್ಯದಲ್ಲೇ ಪರಿಹಾರದ ಹಾದಿ ಹುಡುಕಿಕೊಂಡ. ಇದರಿಂದ ಇಬ್ಬರೂ ನಿಕಟವಾದರು. ಜನ ಮಾತ್ರ ಏನೂ ಅರಿಯದ ಪ್ರಸಾದನಿಗೆ ಶಿವಣ್ಣ ಏನೊ ಕೆಟ್ಟದ್ದು ಮಾಡುತ್ತಿದ್ದಾನೆ ಎಂದು ಮಾತಾಡಿಕೊಳ್ಳುತ್ತಿದ್ದರು.

ವೈದಿಕ ಮನೆತನ, ಸಂಸ್ಕೃತ ಪಂಡಿತ, ಅತಿ ಆಸೆಗೆ ಬಲಿ ಬೀಳದ ಒಬ್ಬ ಒಳ್ಳೆ ಮುಗ್ಧ ವ್ಯಕ್ತಿಯು ಯಾರೋ ಪರದೇಶಿ ನಾಟಿ ವೈದ್ಯನನ್ನು ಗೆಳೆಯನಂತೆ ಹತ್ತಿರ ಮಾಡಿಕೊಂಡಿದ್ದಾನೆಂದರೆ ಅದು ಶಿವಣ್ಣನ ತಂತ್ರವೇ ಹೌದು! ಶಿವಣ್ಣ ಹಣೆಗೆ ವಿಭೂತಿ ಇಟ್ಟು, ದೇವಸ್ಥಾನದ ಆಗು ಹೋಗುಗಳಲ್ಲಿ ತಲೆ ಹಾಕುತ್ತ, ತಾನೊಬ್ಬ ಪರಮ ಸಾತ್ವಿಕ ಎಂದು ತೋರಿಸಿಕೊಳ್ಳುವಂತೆ ಪ್ರಸಾದನನ್ನು ಬಂದು ಹೋದಲ್ಲೆಲ್ಲಾ ಹಿಂಬಾಲಿಸುತ್ತಿದ್ದ. ಪ್ರವಚನಗಳಲ್ಲಿ, ಕಾರ್ಯಕ್ರಮ ಗಳಲ್ಲಿ, ಉತ್ಸವಾದಿಗಳಲ್ಲಿ, ವಿಶೇಷ ದಿನಗಳಲ್ಲಿ ಪ್ರಸಾದನ ಹಿಮ್ಮೇಳವಾಗಿ ಬಿಟ್ಟಿದ್ದ.

ಪ್ರಸಾದ ವಯಸ್ಸಿನಲ್ಲಿ ಕಿರಿಯವನಾದರೂ ಅವನ ನಡವಳಿಕೆ, ಪ್ರಾಮಾಣಿಕತೆ, ಗಾಂಭೀರ್ಯ, ಅಸ್ಖಲಿತ ವಾಣಿಯಲ್ಲಿ ಹೇಳುವ ಮಂತ್ರ ಶ್ಲೋಕಗಳು ಇವೆಲ್ಲಾ ಜನ ಮನ್ನಣೆ ದೊರಕಿಸಿಕೊಟ್ಟಿದ್ದವು. ಜನರ ಮನಸ್ಸನ್ನು ಗೆದ್ದು ಮೇಲೇರಿದ್ದ ಪ್ರಸಾದನ ಬಾಲ ಹಿಡಿದುಬಿಟ್ಟರೆ ತಾನೂ ಸುಲಭವಾಗಿ ಜನಪ್ರಿಯತೆಯಲ್ಲಿ ಮೇಲೇರಿಬಿಡಬಹುದು ಎಂದು ಶಿವಣ್ಣ ಭಾವಿಸಿದ್ದಿರ ಬಹುದು. ಪ್ರಸಾದನ ಅನಾರೋಗ್ಯ ಶಿವಣ್ಣನಿಗೆ ಅನುಕೂಲವೇ ಆಗಿತ್ತು. ಪ್ರಸಾದನಿಗೆ ಔಷಧಿಯೊಂದಿಗೆ ಪಥ್ಯ ಉಪವಾಸಗಳನ್ನು ಕಡ್ಡಾಯ ಗೊಳಿಸುತ್ತಿದ್ದ. ಅವನೇ ಮಾಡುತ್ತಿದ್ದ ಏಕಾದಶಿ, ಅಮಾವಾಸ್ಯೆ ಮುಂತಾದ ನಿಯಮಗಳ ಜೊತೆಗೆ ಈಗ ಶಿವಣ್ಣನ ಪಥ್ಯಗಳೂ ಕೂಡಿಕೊಂಡು, ಕರುಳು ಹಿಂಡಿ ಹೋಗಿ ದಿನೇ ದಿನೇ ಕ್ಷೀಣಿಸಿದ. ಪ್ರಸಾದ ತನ್ನ ಪರಿಸ್ಥಿತಿ ಲೆಕ್ಕಿಸದೆ, ಯಾವುದೋ ಒಂದು ಭಾರ ಇಳಿದು ಹೋಗಲಿ ಎಂಬುವಂತೆ ಇದ್ದುಬಿಟ್ಟಿದ್ದ.

ಕೆಲ ಆಪ್ತ ಹಿರಿಯರು ಹೇಳುತ್ತಿದ್ದರು.

'ಪ್ರಸಾದ ಹೀಗ್ಯಾಕೆ ಮಾಡ್ತೀಯಪ್ಪಾ...? ಇನ್ನೂ ಚಿಕ್ಕವನು. ಮುಂದೆ ಸಂಸಾರಸ್ಥನಾಗುವವನು. ನಿನ್ನ ನೋಡದ್ರೇ ನಮಗೆ ಆತಂಕವಾಗ್ತಿದೆ. ನಿನ್ನ ನಂಬಿರೊ ತಾಯಿ, ತಂದೆ ಗತಿ ಏನಪ್ಪಾ? ನೀನೇ ಅವರ ಆಧಾರ. ನೀನು ಪೂರ್ಣಾಯಸ್ಸು ಬಾಳಬೇಕು...'

ಆಗ ಅವನು ಹೇಳುತ್ತಿದ್ದ, 'ಬ್ರಹ್ಮ ಹಣೇಲಿ ಬರೆದಿದ್ದಷ್ಟೇ ಆಯಸ್ಸು ಇರೋದು... ಅವ್ನು ಹೇಗೆ ನನ್ನ ಹಣೇಲಿ ಬರ್ದಿಟ್ಟಿದ್ದಾನೊ ಹಾಗೇ ಆಗತ್ತೆ! ಅದ್ರ ಚಿಂತೆ ನಾನ್ಯಾಕೆ ಮಾಡ್ಲಿ...? ದೇವ್ರು ಬರ್ದಿರೋದನ್ನ ಯಾರೂ ತಪ್ಸೋಕೆ ಆಗಲ್ಲ...' ಎಂದು ಖಡಕ್ಕಾಗಿ ಹೇಳಿಬಿಡುತ್ತಿದ್ದ.



## ಇಲ್ಲಿಯವರೆಗೆ

ಪ್ರಸಾದನಿಗೆ ಮದುವೆ ಮಾಡಿಸಲು ಅವರಮ್ಮ ಪ್ರಯತ್ನ ಮಾಡುತ್ತಾರೆ. ಚಿತ್ರದುರ್ಗದಲ್ಲಿ ಲಾ ಓದುತ್ತಿರುವ ಹುಡುಗಿಯನ್ನು ಮಾತನಾಡಿಸಬಹುದು ಎಂಬ ವಿಚಾರ ಪ್ರಸಾದಗೆ ಹೇಳಿದಾಗ ಅವನಿಗೆ ಅದು ಹಿತವೆನಿಸುವುದಿಲ್ಲ. ದೇವಸ್ಥಾನದ ಸೂರು ರಿಪೇರಿ ಮಾಡಿಸುವ ವಿಚಾರ ಹೇಳಿದಾಗಲೂ ಪ್ರಸಾದ ಅನಾಸಕ್ತಿ ತೋರುತ್ತಾನೆ. ಅಮೆರಿಕ ಹೋಗಲು ಒಪ್ಪಿಗೆ ಕೊಡದೇ ಇದ್ದದ್ದೇ ಇದಕ್ಕೆ ಕಾರಣ ಎಂದು ಅಪ್ಪ–ಅಮ್ಮ ಭಾವಿಸುತ್ತಾರೆ.

ಗಂಗಾ ಸುನಂದ ಬನ್ನಪ್ಪನವರನ್ನು ಭೇಟಿ ಮಾಡಿ ಮಗಳು ಇಂದ್ರಾ ಗಾಂಧಿಯನ್ನು ಶಾಲೆಗೆ ಸೇರಿಸುವ ವಿಚಾರದ ಬಗ್ಗೆ ಚರ್ಚೆ ಮಾಡುತ್ತಾಳೆ. ಮಗುವಿನ ಹೆಸರು, ಮಗುವಿನ ಅಪ್ಪನ ಹೆಸರು ಅವಳ ಬಳಿಯೇ ಕೇಳುತ್ತಾರೆ. ಶ್ರೀಧರ ಭಟ್ಟರು ಜತೆಗೇ ಇದ್ದಾಗ ಮಗಳು ಚುರುಕಾಗಿ ಉತ್ತರಿಸುತ್ತಾಳೆ.

ಪ್ರಸಾದನ ದನಿಯಲ್ಲಿ ಯಾವುದೋ ಒಂದು ವಿಶೇಷ ಆಕರ್ಷಣೆ ಇರುತ್ತಿತ್ತು. ಆ ದನಿಯನ್ನು ಕೇಳಿದರೇ ಕರಗಿ ಹೋಗಬೇಕು! ಅವನನ್ನು ಕರುಣೆಯಿಂದ ನೋಡಿ ಜನ ಸುಮ್ಮನಾಗುತ್ತಿದ್ದರು.

ಪ್ರಸಾದ ಈಚೀಚೆಗೆ ಎದೆ ಮೇಲೆ ಕೈ ಇಟ್ಟುಕೊಳ್ಳುವ ಒಂದು ವಿಚಿತ್ರ ಚಟ ಹಚ್ಚಿಕೊಂಡುಬಿಟ್ಟಿದ್ದ. ಬಟ್ಟೆಯ ಹರಕನ್ನು ಮುಚ್ಚಿಟ್ಟುಕೊಳ್ಳುವ ಬಡ ಮುತ್ತೈದೆಯಂತೆ ಎದೆ ಮೇಲೆ ಸದಾ ಕೈಯಿಟ್ಟುಕೊಂಡು ಅದೇನೋ ಕಾಣಬಾರದನ್ನು ಮುಚ್ಚಿಟ್ಟುಕೊಳ್ಳುವ ರೀತಿ ಹಸ್ತ ಅಲ್ಲಿಡುತ್ತಿದ್ದ. ಕೈ ಇರದಿದ್ದರೆ ಶಲ್ಯ ಅವನ ಎದೆ ಭಾಗ ಮುಚ್ಚಿಕೊಳ್ಳುತ್ತಿತ್ತು. ಶಲ್ಯ ಎದೆ ಮುಚ್ಚಿಕೊಳ್ಳುವಾಗ ಎರಡೂ ತೋಳುಗಳು ತಮ್ಮ ಬಿಳಿಯ ನಗ್ನತೆ ತೋರುತ್ತಿದ್ದವು. ಅವನ ಬೆಳ್ಳಗಿನ ತೋಳುಗಳೆರಡರ ಮೇಲೂ ಮುಂದ್ರಾಕಿತವಾದ ಶಂಖ–ಚಕ್ರಗಳ ಚಿತ್ರದ ರೇಖೆಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಅದನ್ನು ಮೊದಲ ಬಾರಿ ಕಂಡಾಗ ಶಿವಣ್ಣ, ತನ್ನದೂ ಎಡಗೈ ಚಾಚಿ ಹೇಳಿದ್ದ,

'ನೋಡ್ರೀ ಪ್ರಸಾದಪ್ಪ... ನನ್ನ ಕೈ ಮ್ಯಾಲೂ ಹಚ್ಚೆ ಐತಿ...! ನಮ್ಮಜ್ಜಿ ನಾನು ಸಣ್ಣೋನಿದ್ದಾಗ ಹುಯ್ಸಿದ್ದು... ನಮ್ಮಜ್ಜಿ ಕುಬ್ಸ ಹಾಕ್ಕೋತ್ತಿರಲಿಲ್ಲ... ಆಕಿ ಕಾಲ್ದಾಗ ಹೆಣಮಕ್ಳು ಕುಬುಸ ಹಾಕಾ ರೂಢೀನೇ ಇರ್ತಿರ್ಲಿಲ್ರೀ... ಅವ್ರಿಗೆ ಕುಬ್ಸ ಹಾಕ್ಕೊಂಡ್ರ ನಾಚ್ಕಿ...! ನಮ್ಮಜ್ಜೀ ಕುಬ್ಸ ಹಾಕೋಳ್ದೇ ಹೋದ್ರೂ... ಕುಬ್ಸದ ಹಾಗೇ ಹಚ್ಚೆ ಮೈಗೆಲ್ಲಾ ಹುಯ್ಸಿಕೊಂಡಿದ್ಳು... ಹ್ಯಾಂಗೆ ಅಂತೀರ ಈ ಕಾಲದ ಗುಳೇದ ಗಿಡ್ಡದ ಕುಬ್ಸದ ಹಾಂಗ... ಸಣ್ಣ ಸಣ್ಣ ಚೌಕಳಿ ಮತ್ತೆ ದೊಡ್ಡ ಬಾರ್ಡರ್‌ನ ಅಂಚು...! ಅದ್ಹಾಂಗೆ ಮೈಗೆಲ್ಲಾ ಕಾಸಿದ ಸೂಜಿ ಚುಚ್ಚಿಸಿಕೊಂಡ್ಲೊಯಾನೊ...!'

ಪ್ರಸಾದ ಅರ್ಥವಿಲ್ಲದ ನಗೆ ಚೆಲ್ಲಿ ಸುಮ್ಮನಾಗಿದ್ದ.

ಬಾಲ್ಯದಿಂದ ಪ್ರಸಾದ ತಂದೆಯ ನೆರಳು, ತಾಯಿಯ ಕೈ ತುತ್ತು ತಿಂದು ಪಂಡಿತರ ಸಂಪರ್ಕದಲ್ಲೇ ಬೆಳೆದುಬಂದ. ಪಲ್ಲಕ್ಕಿ ಹೊರುವ ಬೊಂಬಿನಂತೆ ಬದ್ಧ ನಿಯಮದಲ್ಲಿ ರೂಪುಗೊಂಡಿದ್ದ. ಮನಸ್ಸನ್ನು ಬಂಧಿಸಿಕೊಳ್ಳುವುದು ತೀರ ಕಷ್ಟ.

ತಡೆಯಿಲ್ಲದೆ ಅದು ಓಡುತ್ತಲೇ ಇರುತ್ತದೆ. ಆದರೆ ಇದನ್ನು ನಾಲಿಗೆ ತನ್ನ